

## ಮೂವರಾಗಲಿದ್ದೇವೆ...

ಸಂಜೆ ಕಚೇರಿಯಿಂದ ಮನೆಗೆ ಮರಳಿದ ಪತಿಯನ್ನು ಮಮತೆಯಿಂದ ಮುಗುಳ್ನಕ್ಕು ಮಾತನಾಡಿಸಿದ ಪತ್ನಿ ಹೇಳಿದಳು, ‘ಪ್ರಿಯಾ, ನಾವು ಇನ್ನು ಕೆಲ ಸಮಯದಲ್ಲೇ ಈ ಮನೆಯಲ್ಲಿ ಮೂವರಾಗಲಿದ್ದೇವೆ.’

ಇದನ್ನು ಕೇಳಿ ಗಂಡ ತುಂಬ ಖುಷಿಯಿಂದ ಹೇಳಿದ: ‘ನಿಜಾನೆ? ನನಗೆ ನಂಬಿಕೇನೆ ಆಗ್ತಾ ಇಲ್ಲ.’

‘ಯಾಕೆ ನಂಬ್ತಾ ಇಲ್ಲ ನೀವು? ಇನ್ನು ಕೆಲ ದಿನಗಳಲ್ಲೆ ನಮ್ಮ ಅಮ್ಮ ಬಂದು ಇಲ್ಲಿ ನಮ್ಮೊಡನೆಯೇ ಇರುವವರಿದ್ದಾರೆ.

‘ಏನೂ?...’ ಎಂದ ಗಂಡ ಕುರ್ಚಿಯಲ್ಲಿ ಕುಸಿದ!

**ಸಿದ್ದೇಶ್ ಸಣ್ಣಗಿರಿ, ಕೊಟ್ಟೂರು**

## ತಲೆ ನೋವಿಗೆ ಚಿಕಿತ್ಸೆ!

ಸಂತು ವೈದ್ಯರೊಬ್ಬರ ಬಳಿ ಕಾಂಪೌಂಡರ್ ಆಗಿ ಕೆಲಸ ಮಾಡುತ್ತಿದ್ದ. ಆ ವೈದ್ಯರ ಬಳಿ ಬರುವ ರೋಗಿಗಳೆಲ್ಲ ತಲೆ ನೋವಿನ ಗಿರಾಕಿಗಳಾಗಿದ್ದರು. ರೋಗಿಯೊಬ್ಬ ತನ್ನ ತಲೆನೋವಿಗೆ ಪರಿಹಾರ ಪಡೆಯಲು ಅವರ ಬಳಿ ಹೋದ.

‘ಡಾಕ್ಟ್ರೇ ನನಗೆ ಬಹಳ ತಲೆನೋವು ಬಂದಿದೆ ನೋಡಿ’ ಎಂದ.

ಡಾಕ್ಟರ್ ‘ಟೀವಿ. ಧಾರಾವಾಹಿ ಜಾಸ್ತಿ ನೋಡ್ತಿರೇನ್ರೀ! ಎಂದು ಕೇಳಿದರು.

ರೋಗಿ ‘ಹೌದು ಡಾಕ್ಟ್ರೇ’ ಎಂದ.

‘ಹಾಗಾದರೆ ಈ ಮಾತ್ರೆ ತೆಗೆದುಕೊಳ್ಳಿ’ ಎಂದು ಮಾತ್ರೆಗಳನ್ನು ಕೊಟ್ಟರು. ಡಾಕ್ಟರ್ ಪಕ್ಕದಲ್ಲೆ ನಿಂತಿದ್ದ ಸಂತು ಡಾಕ್ಟರ್ ವೃತ್ತಿ ತುಂಬಾ ಸುಲಭವೆಂದು ತಿಳಿದು ತಾನು ಅದೇ ವೃತ್ತಿ ಪ್ರಾರಂಭಿಸಿದ. ಅವನ ಬಳಿ ಅಜ್ಜಿಯೊಬ್ಬಳು ಬಂದು, ‘ತುಂಬಾ ತಲೆನೋವು ಡಾಕ್ಟ್ರೇ!’ ಎಂದಳು.



ಸಂತು ಕೇಳಿದ, ‘ಟಿ.ವಿ. ಧಾರಾವಾಹಿ ತುಂಬಾ ನೋಡ್ತೀಯಾ?’

‘ನಮ್ಮನೇಲಿ ಟೀವಿ. ಇಲ್ಲ ಡಾಕ್ಟ್ರೇ...’

‘ಛೇ! ನೀನು ಟೀವಿ. ಧಾರಾವಾಹಿ ಜಾಸ್ತಿ ನೋಡ್ತಿದ್ರೇ ನಿನಗೆ ಚಿಕಿತ್ಸೆ ಕೊಡುತ್ತಿದ್ದೆ’ ಎಂದು ಕೈ ಕೈ ಹಿಸುಕಿಕೊಂಡು ಅಜ್ಜಿಯನ್ನು ಅಲ್ಲಿಂದ ಸಾಗಹಾಕಿದ!!

**ವಿಜಯಕುಮಾರ ಜೆ. ಹರಪನಹಳ್ಳಿ**